ದಿನಾಂಕ 25-07-2026 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಪಾಟೀ ಸವಾಲುಃ  2 ನೇ  ಎದುರುದಾರರ  ಪರವಾಗಿ ಶ್ರೀ ಎ. ಎಂ ವಕೀಲರವರಿಂದಃ**

ನನ್ನ ಮಗ ಮುತ್ತಪ್ಪ 7 ನೇ ತರಗತಿಯವರೆಗೆ ಓದಿರುತ್ತಾನೆ. ಈಗ ಶಾಲೆಗೆ ಹೋಗುತ್ತಿಲ್ಲ. ಶಾಲೆಗೆ ಹೋಗುವಾಗ ನನ್ನ ಮಗ ಕನ್ನಡಕ ಹಾಕುತ್ತಿದ್ದನು. ಗದಗಿನ ಕಣ್ಣಿನ ಆಸ್ಪತ್ರೆಯಲ್ಲಿ ತೋರಿಸಿರುತ್ತೇವೆ. ನಮ್ಮ ಮನೆ ಹೆಸರೂರಿನಲ್ಲಿ ಇರುತ್ತದೆ. ನಮ್ಮ ಮನಗೂ ಸುವರ್ಣಗಿರಿ ತಾಂಡಾಕ್ಕೂ 20 ಕಿ.ಮೀ ದೂರ ಇದೆ. ನಾನು ಅಪಘಾತವಾದ ದಿನ ಬೇರೆ ಕಡೆ ಕೂಲಿ ಕೆಲಸಕ್ಕೆ  ಹೋಗಿರುತ್ತೇನೆ.  ಅಪಘಾತವಾದ ವಿಚಾರ ನನ್ನ ಮಗ ಹೇಳಿರುತ್ತಾನೆ. ನಾನು ಮಗನನ್ನು ಆಸ್ಪತ್ರೆ ಯಲ್ಲಿ ನೋಡಿರುತ್ತೇನೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತವಾಗುವ ಸಮಯದಲ್ಲಿ ನನ್ನ ಮಗನ ಪ್ರಾಯ 16 ವರುಷ. ಈಗ ಅವನಿಗೆ  19 ವರುಷ. ಅವನಿಗೆ ಅಪಘಾತದ ಬಗ್ಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯನುಡಿಯಲು ಏನು ತೊಂದರೆ ಇಲ್ಲ.

ಅಭಿಷೇಕ್ , ಅಜಯ್ , ಮನು  ಮತ್ತು ನನ್ನ ಮಗ ಮುತ್ತಪ್ಪ ನವರು ಒಂದೇ ಜನಾಂಗಕ್ಕೆ ಸೇರಿದವರು. ನನ್ನ ಮಗ ಆ ದಿನ ಬೈಕಿನಲ್ಲಿ ಪುಟ್ಟಪ್ಪ ನವರ ಮನೆಗೆ ಕೆಲಸಕ್ಕೆ ಹೋಗಿದ್ದರು. ಅಪಘಾತವಾದ ನಂತರ ಲಕ್ಷ್ಮೇಶ್ವರ ಸರ್ಕಾರಿ ಆಸ್ಪತ್ರೆ ಯಲ್ಲಿ  ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಗದಗ್ ಜಿಲ್ಲಾ ಆಸ್ಪತ್ರೆ ಯಲ್ಲಿ ಚಿಕಿತ್ಸೆ  ಪಡೆದುಕೊಂಡಿರುತ್ತಾರೆ.  ನನ್ನ ಮಗ ಗದಗ್ ಜಿಲ್ಲಾ ಆಸ್ಪತ್ರೆ ಯಲ್ಲಿ 15 ದಿನ ಒಳ ರೋಗಿಯಾಗಿ ದಾಖಲಾಗಿದ್ದನು. ನಾನು ಗದಗ್ ಜಿಲ್ಲಾ ಆಸ್ಪತ್ರೆಯಲ್ಲಿ 15 ದಿನ ಒಳ ರೋಗಿಯಾಗಿ ದಾಖಲಾದ ಬಗ್ಗೆ ದಾಖಲಾತಿ ಹಾಜರುಪಡಿಸಿರುವುದಿಲ್ಲ.   ನಿಪಿ 11 ಮತ್ತು 13 ನನ್ನ ಮಗನ ಕಣ್ಣಿನ ಚಿಕಿತ್ಸೆಗೆ ಸಂಬಂದಪಟ್ಟಿರುತ್ತದೆ ಎಂದರೆ ಸರಿ.

ಅಪಘಾತ ಸಮಯದಲ್ಲಿ ಬೈಕನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಈ ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡಿಲ್ಲ. ಅರ್ಜಿ ತಯಾರು ಮಾಡಲು ನಾನು ವಕೀಲರಿಗೆ ಮಾಹಿತಿ ನೀಡಲಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ.   ನಿಪಿ 11 , 12, 13  ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನೀವು ಅರ್ಜಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಷ್ಟು ಹಣವು  ಔಷಧಿಗೆ, ಆಹಾರಕ್ಕೆ, ಒಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲವೆಂದರೆ ಸರಿಯಲ್ಲ. ಅಪಘಾತವು ಅಭಿಷೇಕ್ ತಪ್ಪಿನಿಂದಲೇ ಆಗಿದ್ದರಿಂದ 2 ನೇ ಎದ್ರುದಾರರು ಪರಿಹಾರದ ಹಣವನ್ನು ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

1 ನೇ ಹೆ.ಹಿ.ಸಿ.ನ್ಯಾ ಮತ್ತು ಎಂ.ಎ.ಸಿ.ಟಿ.
ಉಡುಪಿ.